ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ

## ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/52/2015–16 ದಿ: 25–05–2016**

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

| ವಾದಿಗಳು | ಪ್ರತಿವಾದಿಗಳು |
|---|---|
| 2) ಶ್ರೀಮತಿ ಹೆ,ಹೆಚ್.ಎಂ. ಗುರುಬಸಮ್ಮ<br>ಗಂಡ ಎಸ್.ಎಂ.ಬಸಯ್ಯ<br>ಗ್ರಾಮ : ಜಿ.ಕೋಡಿಹಳ್ಳಿ | 1) ಶ್ರೀಮತಿ ಜೆ.ಹೆಚ್.ಎಂ.ಪಾರ್ವತಮ್ಮ<br>ಗಂಡ ರುದ್ರಮುನಿಸ್ವಾಮಿ<br>ಗ್ರಾಮ : ಜಿ.ಕೋಡಿಹಳ್ಳಿ |
| 3) ಶ್ರೀ ಸಿ.ಬಸವರಾಜ<br>ನ್ಯಾಯವಾದಿಗಳು,<br>ಹಗರಿಬೊಮ್ಮನಹಳ್ಳಿ. | 2) ಹೆಚ್.ಸತ್ಯನಾರಾಯಣ<br>ನ್ಯಾಯವಾದಿಗಳು<br>ಹಗರಿಬೊಮ್ಮನಹಳ್ಳಿ |

---

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 292 ಪೈಕಿ ವಿಸ್ತೀರ್ಣ 3–00 ಎಕರೆ ಜಮೀನನ್ನು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 30/ದಿ: 29–1–2009 ರಂತೆ ವಾದಿಯು ಹಕ್ಕು ಬದಲಾವಣೆ ಹೊಂದಲು ಅರ್ಜಿ ಮಾಡಿಕೊಂಡಿರುತ್ತಾರೆ. ಇದಕ್ಕೆ ತಕರಾರು ಬಂದಿರುವುದರಿಂದ ವಿಚಾರಣೆ.**

---

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 292 ಪೈಕಿ ವಿಸ್ತೀರ್ಣ 3–00 ಎಕರೆ ಜಮೀನನ್ನು ವಾದಿಯು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 30/ದಿ: 29–01–2009 ರಂತೆ ಹೊಂದುತ್ತಾ ವಿಲ್ ನೊಂದಣಿ ಮಾಡಿಸಿಕೊಟ್ಟಿರುವವರು ದಿನಾಂಕ: 06–02–2014 ರಂದು ಮರಣ ಹೊಂದಿದ್ದು ಇವರ ಮರಣಾ ನಂತರ ವಾದಿಯು ತಮ್ಮ ಹೆಸರಿನಲ್ಲಿ ಹಕ್ಕು ವರ್ಗಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಮಾಡಿಕೊಂಡಿರುತ್ತಾರೆ. ಇದರನ್ವಯ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿಯ ವಹಿವಾಟು ಸಂಖ್ಯೆ 81 ಹಕ್ಕು ಬದಲಾವಣೆ ಸಂಖ್ಯೆ ಹೆಚ್–28 ರಂತೆ ವಹಿವಾಟು ಹೊಂದುತ್ತಾ ಮುಂದಿನ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಜಿ.ಕೋಡಿಹಳ್ಳಿ ಇವರು ಸದರಿ ನೋಟೀಸುಗಳನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಸದರಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳಿಂದ ತಾಲೂಕಾ ಭೂಮಿ ಕೇಂದ್ರದಲ್ಲಿ ತಕರಾರು ಸ್ವೀಕೃತಿ ಸಂಖ್ಯೆ 3645/2015-16/ದಿನಾಂಕ: 05-11-2015 ಹಾಗೂ ಸ್ವೀಕೃತಿ ಸಂಖ್ಯೆ 5128/2015-16 ದಿನಾಂಕ: 28-12-2015 ರಂತೆ ತಕರಾರು ದಾಖಲು ಮಾಡಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ನ್ಯಾಯಾಲಯದಲ್ಲಿ ಈ ಮೇಲಿನ ಸಂಖ್ಯೆಯಂತೆ ಪ್ರಕರಣ ದಾಖಲಿಸಿಕೊಂಡು ದಿನಾಂಕ: 21-03-2016 ರಿಂದ 19-05-2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಕರಣಕ್ಕೆ ವಾದಿಗಳ ಪರವಾಗಿ ಶ್ರೀ ಸಿ.ಬಸವರಾಜ ನ್ಯಾಯವಾದಿಗಳು ಹಾಗೂ ಪ್ರತಿವಾದಿಗಳ ಪರವಾಗಿ ಶ್ರೀ ಹೆಚ್.ಸತ್ಯನಾರಾಯಣ ನ್ಯಾಯವಾದಿಗಳು ವಕಾಲತ್ ವಹಿಸಿಕೊಂಡಿರುತ್ತಾರೆ. ವಾದಿ ಪ್ರತಿವಾದಿಗಳಿಗೆ ನೋಟೀಸು ಜಾರಿ ಮಾಡಿ ವಿಚಾರಣೆಯನ್ನು ನಡೆಸುತ್ತಾ ದಾಖಲೆಗಳನ್ನು ಪರಿಶೀಲಿಸಲಾಯಿತು.

ದಾಖಲೆಗಳನ್ನು ಪರಿಶೀಲಿಸಲಾಗಿ ವಿಲ್ ದಸ್ತಾವೇಜ್ ಪರಿಶೀಲಿಸಲಾಗಿ ಸದರಿ ದಸ್ತಾವೇಜು ನೊಂದಾಯಿತ ಸಂಖ್ಯೆ 30/ದಿನಾಂಕ: 29-01-2009 ರಂತೆ ನೊಂದಣಿಯಾಗಿರುತ್ತದೆ. ಪಹಣಿ ಪರಿಶೀಲಿಸಲಾಗಿ ಹಾಲೀ ಲೆಕ್ಕದಾಖಲು ಸ.ನಂ. 292 ಪೂರಾ ವಿಸ್ತೀರ್ಣ 29-32 ಎಕರೆ ಪೈಕಿ 3-00 ಎಕರೆ ಜಮೀನು ವಿಲ್ ನೊಂದಣಿ ಮಾಡಿಸಿಕೊಟ್ಟಿರುವ ಶ್ರೀ ದಿ॥ ಜೆ.ಹೆಚ್.ಎಂ. ಬಸವರಾಜ ತಂದೆ ರುದ್ರಮುನಿ ಸ್ವಾಮಿ ಎಂದಿರುತ್ತದೆ. ಸದರಿ ವಿವಾದಿತ ಜಮೀನು ಇವರಿಗೆ ಪಿತ್ರಾರ್ಜಿತವಾಗಿ ಹಾಗೂ ಪಾಲುವಿಭಾಗದ ಪ್ರಕಾರ ಬಂದಿರುವುದು ಕಂಡು ಬಂದಿರುತ್ತದೆ. ಈ ಪ್ರಕಾರ ಇವರಿಂದ ವಾದಿಗಳಿಗೆ ವಿಲ್ ನೊಂದಣಿಯಾಗಿರುತ್ತದೆ. ಹಾಗೂ ದಿನಾಂಕ: 06-02-2014 ರಂದು ಮರಣ ಹೊಂದಿರುವುದು ಹಾಜರುಪಡಿಸಿರುವ ಮರಣ ಪ್ರಮಾಣಪತ್ರದಿಂದ ಕಂಡು ಬಂದಿದೆ. ಹೀಗಾಗಿ ವಾದಿಗಳು ವಿಲ್ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆಗಾಗಿ ಅರ್ಜಿ ಮಾಡಿಕೊಂಡಿರುತ್ತಾರೆ. ಹಾಗೂ ಇವರು ಹಾಜರುಪಡಿಸಿರುವ ವಂಶವೃಕ್ಷ ಪರಿಶೀಲಿಸಲಾಗಿ ದಿ॥ ಜೆ.ಹೆಚ್.ಎಂ.ಬಸವರಾಜ ತಂದೆ ರುದ್ರಮುನಿಸ್ವಾಮಿ ಇವರು ದಿ॥ ಜೆ.ಹೆಚ್.ಎಂ. ರುದ್ರಮುನಿಸ್ವಾಮಿಯ ಮೊದಲನೇ ಹೆಂಡತಿ ಬಸಮ್ಮ ಇವರ ಮೂರನೇ ಮಗನಾಗಿದ್ದು ವಾದಿಯ ದಿ॥ ಜೆ.ಹೆಚ್.ಎಂ. ಬಸವರಾಜ ಇವರು ಒಡಹುಟ್ಟಿದ ತಂಗಿ ಇರುವರು. ತಂದೆ ಜೆ.ಹೆಚ್.ಎಂ. ರುದ್ರಮುನಿಸ್ವಾಮಿಯ ಎರಡನೇ ಹೆಂಡತಿ ಶಾಂತಮ್ಮ ಪವತಿಯಾಗಿದ್ದು ಇವರಿಗೆ ಸಂತಾನ ಇರುವುದಿಲ್ಲ. ಪ್ರತಿವಾದಿಗಳು ದಿ॥ ರುದ್ರಮುನಿಸ್ವಾಮಿಯ ಮೂರನೇ

ಹೆಂಡತಿಯಾಗಿರುವರು. ಇವರು ಪ್ರಕರಣಕ್ಕೆ ತಕರಾರು ಸಲ್ಲಿಸಿರುವರು. ಪ್ರಕರಣಕ್ಕೆ ಸಂಬಂಧಿಸಿದ ಜಮೀನು ಸಿವಿಲ್ ನ್ಯಾಯಾಲಯದಲ್ಲಿ ಎದುರುದಾರಳಾದ ಶ್ರೀಮತಿ ಜೆ.ಹೆಚ್.ಎಂ. ಪಾರ್ವತಮ್ಮ ಇವರು ಖಟ್ಲೆ ದಾಖಲಿಸಿರುವುದಿಲ್ಲವೆಂದು ವಾದಿ ಪರ ನ್ಯಾಯವಾದಿಗಳು ತಿಳಿಸಿರುತ್ತಾರೆ ಹಾಗೂ ಪ್ರತಿವಾದಿಗಳು ದಿ॥ ಜೆ.ಹೆಚ್.ಎಂ. ರುದ್ರಮುನಿಸ್ವಾಮಿಯು ಮೂರನೇ ಹೆಂಡತಿಯಿದ್ದು ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಇತ್ಯರ್ಥಪಡಿಸಿಕೊಳ್ಳಲು ನಿರ್ದೇಶಿಸುತ್ತಾ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 292 ಪೈಕಿ ವಿಸ್ತೀರ್ಣ 29-32 ಎಕರೆ ಪೈಕಿ 3-00 ಎಕರೆ ಜಮೀನನ್ನು ವಿಲ್ ದಸ್ತಾವೇಜು ಸಂಖ್ಯೆ 30/ದಿನಾಂಕ: 29-01-2009 ರಂತೆ ವಾದಿಯಾದ ಶ್ರೀಮತಿ ಜೆ.ಹೆಚ್.ಎಂ. ಗುರುಬಸಮ್ಮ ಗಂಡ ಎಸ್.ಎಂ.ಬಸಯ್ಯ ಜಿ.ಕೋಡಿಹಳ್ಳಿ ಇವರ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 128 ಹಾಗೂ 129 ರಡಿಯಲ್ಲಿ ಹಕ್ಕುಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿ: 25-05-2016 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿ + ಪ್ರತಿವಾದಿಗಳು
2) ಪ್ರತಿಯನ್ನು ನ್ಯಾಯವಾದಿಗಳು (ವಾದಿ+ಪ್ರತಿವಾದಿ)
3) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
4) ಹೆಚ್ಚುವರಿ ಪ್ರತಿ ಕಡತಕ್ಕೆ